# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 291

**1 ಮೇ 2026 * ಶುಕ್ರವಾರ * ಸಂಜೆ 6.00**

## ದಿವ್ಯ ಸಾನ್ನಿಧ್ಯ

## ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಗಾಯನ



ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ



ವಿದ್ವಾನ್ ಮತ್ತೂರು ಶ್ರೀನಿಧಿ
ವಯೊಲಿನ್



ವಿದ್ವಾನ್ ತುಮಕೂರು ಬಿ. ರವಿಶಂಕರ್
ಮೃದಂಗ



ವಿದ್ವಾನ್ ಶರತ್ ಕೌಶಿಕ್
ಘಟಂ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ**ರವರು ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ತಂದೆ ಸಂಗೀತ ಕಲಾರತ್ನ ವಿದ್ವಾನ್ ಬಳ್ಳಾರಿ ಎಂ. ವೆಂಕಟೇಶ್ ಆಚಾರ್. ಚಿಕ್ಕಪ್ಪ ವಾಗ್ಗೇಯಕಾರ ಬಳ್ಳಾರಿ ಎಂ. ಶೇಷಗಿರಿ ಆಚಾರ್. ಅವರಿಬ್ಬರಿಂದಲೂ ಸಂಗೀತವನ್ನು ಕಲಿತು ಅವರ ಪ್ರಭಾವಲಯದಲ್ಲಿ ಬೆಳೆದವರು. ಶ್ರೀ ರಾಘವೇಂದ್ರರವರು ಆಕಾಶವಾಣಿಯ "ಟಾಪ್" ಶ್ರೇಣಿ ಕಲಾವಿದರು. ಕರ್ನಾಟಕ ಸಂಗೀತದಲ್ಲಿ ಎಂ.ಎ. (ಮ್ಯೂಸಿಕ್) ಪದವೀಧರರು. ಕರ್ನಾಟಕ ಸರ್ಕಾರವು ನಡೆಸುವ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ವಿದ್ವಾನ್ ರಾಘವೇಂದ್ರರವರು ಭಾರತವಲ್ಲದೆ ವಿದೇಶಗಳಲ್ಲೂ ಪ್ರಸಿದ್ಧಿ ಪಡೆದಿದ್ದಾರೆ. ಅತ್ಯುತ್ತಮ ಆಲಾಪನೆ, ಗಮಕಗಳು, ಸಾಹಿತ್ಯ-ಸಂಗೀತ ಶುದ್ಧಿ, ಸಾಂಪ್ರದಾಯಿಕ ನಿಷ್ಠೆ, ನಾದಸೌಖ್ಯಗಳು ಇವರ ಸಂಗೀತದ ಪ್ರಮುಖ ಲಕ್ಷಣಗಳು. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪರಿಚಯವೂ ಇರುವುದು ಇವರ ಸಂಗೀತಕ್ಕೆ ವಿಶೇಷ ಕಳೆಯನ್ನು ತಂದುಕೊಟ್ಟಿದೆ. ಖ್ಯಾತ ಹಿಂದೂಸ್ತಾನಿ ಗಾಯಕರ ಜೊತೆಗೂ ಜುಗಲಬಂದಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ.

ಆಕಾಶವಾಣಿಯ ವಿವಿಧ ಹುದ್ದೆಗಳಲ್ಲಿ ಸುಮಾರು 33 ವರ್ಷಗಳ ಕಾಲ ಕಾರ್ಯ ನಿರ್ವಹಿಸಿ ಸಹಾಯಕ ನಿರ್ದೇಶಕರಾಗಿ ನಿವೃತ್ತಿ ಹೊಂದಿದ್ದಾರೆ. ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದರಾದ ಶ್ರೀ ವಿಜಯಪ್ರಕಾಶ್‌ರವರು ಇವರ ಮೆಚ್ಚಿನ ವಿದ್ಯಾರ್ಥಿಗಳಲ್ಲೊಬ್ಬರು. ಸಂಗೀತ ಸಾಧನೆಗಾಗಿ ಗಾನಕಲಾವಿಭೂಷಣ, ಸ್ವರಭಾರ್ಗವ, ಸಂಗೀತ ವಿದ್ವನ್ಮಣಿ, ಕಲಾತಪಸ್ವಿ, ಗಾನಕಲಾ ಸುರಭಿ ಮೊದಲಾದ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು ಲಭಿಸಿವೆ.

**ವಿದ್ವಾನ್ ಮತ್ತೂರು ಶ್ರೀನಿಧಿಯವರು** ವಿದ್ವಾನ್ ಆರ್.ಆರ್. ಕೇಶವಮೂರ್ತಿಯವರಲ್ಲಿ ವಯೊಲಿನ್ ವಾದನವನ್ನು ಮತ್ತು ಆರ್.ಎನ್. ತ್ಯಾಗರಾಜನ್‌ರವರಲ್ಲಿ ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸಿದ್ದಾರೆ. ಮದ್ರಾಸ್ ವಿಶ್ವವಿದ್ಯಾನಿಲಯದ ಎಂ.ಮ್ಯೂಸಿಕ್ ಪದವೀಧರರು. ಅನನ್ಯ ಪ್ರತಿಭಾ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಆಕಾಶವಾಣಿ ಮತ್ತು

ದೂರದರ್ಶನದ "ಎ" ಶ್ರೇಣಿ ಕಲಾವಿದರು. ಯೂರೋಪ್ ಹಾಗೂ ಮಧ್ಯ ಪ್ರಾಚ್ಯ ದೇಶಗಳಲ್ಲಿ ವ್ಯಾಪಕವಾಗಿ ಸಂಚರಿಸಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ವಿದ್ವಾನ್ ತುಮಕೂರು ಬಿ. ರವಿಶಂಕರ್**ರವರೂ ಸಹ ಸಂಗೀತದ ಮನೆತನದಿಂದ ಬಂದವರು. ಮುತ್ತಾತ ಶ್ರೀ ಭದ್ರಾಚಾರ್, ತಾತ ಎಚ್.ಟಿ. ವೀರಭದ್ರಾಚಾರ್ (ಮೋರ್ಸಿಂಗ್) ಮತ್ತು ತಂದೆ ತುಮಕೂರು ಟಿ.ವಿ. ಭದ್ರಾಚಾರ್ – ಎಲ್ಲರೂ ತಾಳವಾದ್ಯ ಪ್ರವೀಣರು. ತಂದೆಯವರ ಬಳಿ ಮೃದಂಗ ವಾದನದಲ್ಲಿ ಪ್ರಾರಂಭಿಕ ಶಿಕ್ಷಣ, ಬಳಿಕ ಖ್ಯಾತ ಮೃದಂಗ ಮಾಂತ್ರಿಕ ಕಾರೈಕ್ಕುಡಿ ಆರ್. ಮಣಿಯವರ ಬಳಿ ಉನ್ನತ ಶಿಕ್ಷಣ ಪಡೆದರು. "ನಾದ–ಲಯ–ಲಹರಿ" ಎಂಬ ಸಾಂಸ್ಕೃತಿಕ ಸಂಸ್ಥೆಯನ್ನು ಸ್ಥಾಪಿಸಿ ಹಲವಾರು ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ.

ಆಕಾಶವಾಣಿ ಮತ್ತು ದೂರದರ್ಶನದ ಟಾಪ್ ಶ್ರೇಣಿ ಕಲಾವಿದರು. ಸಂಗೀತಗಾರರ ಮನೋಧರ್ಮವನ್ನರಿತು ಮೃದಂಗ ನುಡಿಸುವ ಕಲೆ ಇವರಿಗೆ ಸಿದ್ಧಿಸಿದೆ. ಖ್ಯಾತ ಕಲಾವಿದರೊಡನೆ ಜುಗಲ್‌ಬಂದಿ ಕಾರ್ಯಕ್ರಮ ನೀಡುತ್ತಾರೆ. ಅಖಿಲ ಭಾರತ ಸ್ಪರ್ಧೆಯಲ್ಲಿ ಮೃದಂಗ ವಾದನದಲ್ಲಿ ಪ್ರಥಮ ಬಹುಮಾನ. ಹಲವಾರು ಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿರುವ ಹೆಗ್ಗಳಿಕೆ. ಇವರ ಅಪೂರ್ವ ವಿದ್ವತ್ತಿಗಾಗಿ ಅನನ್ಯ ಪುರಸ್ಕಾರ್, ಸತ್ಯಶ್ರೀ ಪ್ರಶಸ್ತಿ, ಕಂಚಿ ಕಾಮಕೋಟಿ ಪೀಠದ ಆಸ್ಥಾನ ವಿದ್ವಾನ್ ಗೌರವಗಳು ಲಭಿಸಿವೆ.

**ವಿದ್ವಾನ್ ಶರತ್ ಕೌಶಿಕ್ರವರು** ಕರ್ನಾಟಕದ ಉದಯೋನ್ಮುಖ ಪ್ರತಿಭಾವಂತ ಕಲಾವಿದರಲ್ಲೊಬ್ಬರು. ಇವರು ಮೃದಂಗ ಮತ್ತು ಘಟಂ ವಾದನದಲ್ಲಿ ಪ್ರಾವೀಣ್ಯತೆ ಗಳಿಸಿದ್ದಾರೆ. ವಿದ್ವಾನ್ ವಿ.ಎಸ್. ರಮೇಶ್‌ರವರ ಬಳಿ ಪ್ರಾರಂಭಿಕ ಶಿಕ್ಷಣ ಪಡೆದರು. ಪ್ರಸ್ತುತ ವಿದ್ವಾನ್ ತುಮಕೂರು ಬಿ. ರವಿಶಂಕರ್‌ರವರ ಬಳಿ ಮೃದಂಗ ವಾದನದ ಸೂಕ್ಷ್ಮತೆಗಳನ್ನು ಕಲಿಯುತ್ತಿರುವರು. ಆಕಾಶವಾಣಿಯ ಬಿ–ಹೈ ಶ್ರೇಣಿ ಕಲಾವಿದರು. ಕಾಗ್ನಿಸೆಂಟ್ (ಸಿಬಿಎಸ್) ಸಾಫ್ಟ್‌ವೇರ್ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

# ಬೆಳದಿಂಗಳ ಸಂಗೀತ 292

## 31 ಮೇ 2026



ಗಾಯನ

**ವಿದುಷಿ ಅರ್ಚನಾ ಎಲ್. ರಾವ್**

ವಯೊಲಿನ್

**ವಿದುಷಿ ಸಿ.ವಿ. ಶ್ರುತಿ**





ಮೃದಂಗ

**ವಿದ್ವಾನ್ ಸುನಿಲ್ ಸುಬ್ರಹ್ಮಣ್ಯಂ**

ಖಂಜರ

**ವಿದ್ವಾನ್ ರಾಜಪುರಂ ಆರ್. ಕಾರ್ತಿಕ**

---

☎ 0821–2548221, 2548223 * ✉ sutturmath@jssonline.org